Employment Opportunities to "Kannadigas" in Industries in the State

813. **Sri K. H. SRINIVASA** (Sagar).—

Will the Minister for Law, Labour and Parliamentary Affairs be pleased to state :—

(*a*) whether there is any condition for giving preference to "Kannadigas" in respect of employment in the Industries started in Mysore State ;

(*b*) if so, the detailed nature of the condition and percentage insisted ;

(*c*) if not, will the Government has any proposal to consider the advisability of insisting on a minimum of 75 per cent employment opportunities to "Kannadigas" in the existing Industries and the industries to be started in the State of Mysore ?

Sri K. PUTTASWAMY (Minister for Law, Labour and Parliamentary Affairs).—

(*a*) No,

(*b*) The question does not arise in view of the reply to clause (*a*) above.

(*c*) No such stipulation is permissible under the Constitution.

ಶ್ರೀ ಕೆ. ಎಚ್ ಶ್ರೀನಿವಾಸ್.—ರಾಜ್ಯದಲ್ಲಿ ಪ್ರಾರಂಭಿಸಲಾದ ಕೈಗಾರಿಕೆಗಳಲ್ಲಿ ಕೆಲಸ ಒದಗಿಸುವ ಬಗ್ಗೆ ಕನ್ನಡಿಗರಿಗೆ ಪ್ರಾಶಸ್ತ್ಯ ನೀಡಲು ಷರತ್ತೇನೂ ಇಲ್ಲ ಎಂದು ತಿಳಿಸಲಾಗಿದೆ. ಆದರೆ ಹಾಲಿ ಇರುವ ಕೈಗಾರಿಕೆಗಳಲ್ಲಿ ಮತ್ತು ಮುಂದೆ ಪ್ರಾರಂಭಿಸುವ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಸಾಕಷ್ಟು ಉದ್ಯೋಗಗಳನ್ನು ಒದಗಿಸುವ ವಿಚಾರದಲ್ಲಿ ಸರಕಾರದ ನಿರ್ದಿಷ್ಟವಾದ ನೀತಿಯೇ ನಾದರೂ ಇದೆಯೇ ಅಥವ ಸರಕಾರ ತಟಸ್ಥವಾಗಿರುವುದಕ್ಕೆ ಬಯಸುವುದೋ ?

Sri K. PUTTASWAMY.—The Hon. Member seems to be having in his mind perhaps the people from Mysore State. If that is so, it is a different matter altogether, but for his information I can say that Government do not consider it advisable to make such a reservation as the State is not unilingual.

Sri K. H. SRINIVASA.—I do not understand the clarification that was given by the Hon. Minister. By 'Kannadigas' I meant people of Mysore State. I think there is nothing wrong in meaning like that.

Sri K. PUTTASWAMY.—He is entitled to have that opinion. I do not dispute that.

Sri K. H. SRINIVASA.—I want to know from the Hon. Minister whether it makes any difference in the answer if it is to be mentioned here as people of Mysore State.

Sri K. PUTTASWAMY.—Even if it is mentioned as people of Mysore State it is not going to make much difference because under the Constitution we are probihited from making any reservation in respect of any one section of people.

ಶ್ರೀ ಸಿದ್ದಯ್ಯ ಕಾಶೀಮಠ.—ಆಂಧ್ರ, ಮದ್ರಾಸು ಮತ್ತು ಮಹಾರಾಷ್ಟ್ರಗಳಲ್ಲಿ ಕಡ್ಡಾಯವಾಗಿ ತೆಲುಗು, ತಮಿಳು ಮತ್ತು ಮರಾಠಿ ಮಾತನಾಡುವವರನ್ನೇ ತೆಗೆದುಕೊಳ್ಳಬೇಕೆಂದು ಮಾಡಿರುವಂತೆ, ಮೈಸೂರಿನಲ್ಲೂ ಅದೇ ರೀತಿ ಕಡ್ಡಾಯವಾಗಿ ಮಾಡಲು ತೊಂದರೆಯೇನು ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಹೇಳಿದಂತೆ ಇತರ ರಾಜ್ಯಗಳಲ್ಲಿ ಕಡ್ಡಾಯಮಾಡಿರುವುದು ನನಗೆ ಗೊತ್ತಿಲ್ಲ. ಆದುದರಿಂದ ಅದಕ್ಕೆ ಉತ್ತರ ಕೊಡಲು ಸಾಧ್ಯವಿಲ್ಲ.

Sri H. SIDDAVEERAPPA.—Is the Hon. Minister aware that sometime back the Hon. Chief Minister made a statement that so far as industries established in Mysore State are concerned, Government would make all-out efforts to see that Mysoreans are preferred and they are given employment ? If so, does not the present reply run counter to what the Hon. Chief Minister has said ?

Sri K. PUTTASWAMY.—The reply that I now gave does not run counter to what the Hon. Chief Minister has said. We have been making efforts. The Hon. Chief Minister has already written to the Prime Minister and the Prime Minister has replied to his letter and the other day on the floor of the other House I read out that reply. In her reply the Prime Minister has stated that as far as public undertakings of the Government of India situated in Mysore State are concerned, they have already issued instructions to the effect that for all posts which are equal to and above gazetted cadre, the undertakings should get names from the National Employment Exchange and for all other jobs they should get their requirements from the local employment exchange.

Sri C. K. RAJAIAH SHETTY.—You are aware that in most of these undertakings wherever the General Managers are the appointing authorities and if they are men of different regions they prefer their own people. If the General Manager is a Keralite he prefers Kerala people only and if he is a Tamilian he prefers Tamilians only and if he is a Bengali he prefers Bengalis only with the result that people of Mysore are not getting employment in these undertakings.

ಶ್ರೀ ಕೆ. ಪುಟ್ಟಸ್ವಾಮಿ.—ಆ ರೀತಿ ಮಾಡುವುದಕ್ಕಾಗುವುದಿಲ್ಲ. ಆದರೆ ಪರ್ಸನಲ್ ಮ್ಯಾನೇಜರ್ ಇರುವ ಕಡೆ ಸ್ವಲ್ಪ ವೆತ್ಯಾಸವಾಗುತ್ತಿದೆ ಎಂಬ ಅಪಾದನೆ ಇದೆ. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಪ್ರಧಾನಮಂತ್ರಿಗಳಿಗೆ ಕಾಗದ ಬರೆದು ನಮ್ಮ ರಾಜ್ಯದಲ್ಲಿರುವ ಇಂಡಿಯಾ ಸರಕಾರದ ಅಂಡರ್‌ಟೇಕಿಂಗ್ಸ್‌ನಲ್ಲಿ, ಕೈಗಾರಿಕಾ ಸಂಸ್ಥೆಗಳಲ್ಲಿ ಅವುಗಳಿಗೆರ್ಪಾ ಪರ್ಸನಲ್ ಮ್ಯಾನೇಜರ್ ಹುದ್ದೆಗೆ ನಮ್ಮ ರಾಜ್ಯ ಸರಕಾರದ ಸೇವೆಯಲ್ಲಿರುವವರನ್ನೇ ಎರವಲಾಗಿ ತೆಗೆದುಕೊಳ್ಳಬೇಕೆಂದು ತಿಳಿಸಿದ್ದಾರೆ.

ಶ್ರೀ ಎಸ್. ಪಿ. ಅಗ್ನಿಹೋತ್ರಿ.—ಬೆಳಗಾಂನಲ್ಲಿರತಕ್ಕ ಅಲ್ಯೂಮಿನಿಯಂ ಫ್ಯಾಕ್ಟರಿಗೆ ಜನರನ್ನು ತೆಗೆದುಕೊಳ್ಳುವಾಗ ನ್ಯಾಷನಲ್ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದ ತೆಗೆದುಕೊಳ್ಳುತ್ತಾರೆಯೋ ಅಥವಾ ಕರ್ನಾಟಕ ಎಂಪ್ಲಾಯ್‌ಮೆಂಟ್ ಎಕ್ಸ್‌ಚೆಂಜಿನಿಂದ ತೆಗೆದುಕೊಳ್ಳುತ್ತಾರೆಯೋ?

ಶ್ರೀ ಕೆ. ಪುಟ್ಟಸ್ವಾಮಿ.—ಅದು ಖಾನಗಿ ಕ್ಷೇತ್ರದಲ್ಲಿದೆ. ಅವರಿಗೂ ನಾವು ತಿಳಿಸಿದ್ದೇವೆ. ನಮ್ಮ ಲೋಕಲ್ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಿಂದ ಅವರಿಗೆ ಬೇಕಾದಂತ ಜನರನ್ನು ತೆಗೆದುಕೊಳ್ಳಬೇಕೆಂದು.

ಶ್ರೀ ವಿ. ಎನ್. ಪಾಟೀಲ್.—ಹಿಂದೆ ತಾವು ಅಪೋಸಿಷನ್ ಎಂ.ಎಲ್.ಎ.ಗಳನ್ನು ಕರೆಸಿ ಆದಷ್ಟು ಮೈಸೂರಿಯನ್ ಜನರಿಗೇ ಪ್ರಾಶಸ್ತ್ಯ ಕೊಡುವಂತೆ ಹೇಳುತ್ತೇವೆ ಎಂದು ಹೇಳಿದ್ದಿರಿ. ಮೈಸೂರಿಯನ್ ಎಂದರೆ ಡೆಫಿನಿಷನ್ ಏನು ಎಂಬುದನ್ನು ತಿಳಿಸಬೇಕು. ಮೈಸೂರು ಸ್ಟೇಟ್ ನವರು ಅಂತ ಇದ್ದರೆ ಶಿವಸೇನೆ ಡಿಮ್ಯಾಂಡ್ ಏನಿದೆ ಅದಕ್ಕೂ ನಿಮ್ಮ ಡೆಫಿನಿಷನ್‌ಗೂ ಏನು ವ್ಯತ್ಯಾಸ ಇದೆ ಎಂಬುದನ್ನು ವಿವರಿಸಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಇನ್ನೊಂದು ಸಾರಿ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ.

ಶ್ರೀ ವಿ. ಎನ್. ಪಾಟೀಲ್.—ಸ್ವಾಮಿ ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ. ಇನ್ನೊಂದುಸಾರಿ ಕೇಳಿ ಅಂತ ಮಾನ್ಯ ಮಂತ್ರಿಗಳು ಹೇಳುತ್ತಾ ಇದ್ದಾರೆ, ದಯವಿಟ್ಟು ಈ ತರಹ ತುಳಿಯಬೇಡಿ ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ತಿಳಿಯುವಹಾಗೆ ಪ್ರಶ್ನೆ ಕೇಳಬೇಕು.

ಶ್ರೀ ವಿ. ಎನ್. ಪಾಟೀಲ್.—ನನ್ನ ಪ್ರಶ್ನೆ. ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು ಆಪೋಸಿಷನ್ ಎಂ.ಎಲ್.ಎ.ಗಳ ವಿಷಯಿಂಗ್ ಕರೆದು ಅಲ್ಲಿನ ಸ್ಥಳಗಳಿಗೆ ನೌಕರಿಕೊಡುವಾಗ ಆದಷ್ಟು ಮೈಸೂರಿಯನ್‌ರಿಗೆ ಕೊಡಬೇಕೆಂದು ಹೇಳುವಂತಹ ಒಂದು ವಿಚಾರ. ಅಥವಾ ಒಪೀನಿಯನ್ ಫಾರಂ ಮಾಡುವುದಕ್ಕೆ ಪ್ರಯತ್ನಪಟ್ಟರು ಎಂದು ತಿಳಿದುಕೊಂಡಿದ್ದೇನೆ, ಮೈಸೂರಿಯನ್ ಅಂತ ಅಂದರೆ ಅದರ ಡೆಫಿನಿಷನ್ ಏನು ? ಮೈಸೂರಿಯನ್ ಅಂದರೆ ಮೈಸೂರಿನಲ್ಲಿ ಇದ್ದವರು ಅಂತ ಆದರೆ ಮಹಾರಾಷ್ಟ್ರದ ಶಿವಸೇನೆಯವರು ಹೇಳುತ್ತಿರುವ ಡೆಫಿನಿಷನ್‌ಗೂ ಇದಕ್ಕೂ ವ್ಯತ್ಯಾಸವೇನು ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಪ್ರಶ್ನೋತ್ತರ ವೇಳೆಯಲ್ಲಿ ಸರ್ಕಾರದಿಂದ ಸಮಾಚಾರ ಸಂಗ್ರಹಿಸಬಹುದು. ನಮ್ಮ ಹತ್ತಿರ ಇರತಕ್ಕ ಸಮಾಚಾರ ಕೊಡುತ್ತೇನೆ. ವಿರೋಧ ಪಕ್ಷದ ಸದಸ್ಯರುಗಳನ್ನು ಮಾನ್ಯ ಮುಖ್ಯ ಮಂತ್ರಿಗಳವರು ಭೇಟಿ ಮಾಡಿದಾಗ, ಒಂದು ಮೆಮೋರ್ಯಾಂಡಂ ತಯಾರು ಮಾಡಿ ಇಂಡಿಯಾ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ—ಅಂದರೆ ನ್ಯಾಷನಲ್ ಲೇಬರ್ ಕಮಿಷನ್‌ಗೆ ಕಳುಹಿಸಿಕೊಟ್ಟಿದ್ದೇವೆ ಎಂದು ಹೇಳಿದ ಹಾಗೆ ನನಗೆ ಜ್ಞಾಪಕ ಇದೆ. ಮಾನ್ಯ ಸದಸ್ಯರು ಮೈಸೂರಿಯನ್ ಅಂತ ಅನ್ನುವುದಕ್ಕೆ ಏನು ಡೆಫಿನಿಷನ್ ಅಂತ ಕೇಳಿದರು, ಅದು ಅಭಿಪ್ರಾಯದ ಮಾತು, ಮೈಸೂರಿನಲ್ಲಿ ಇದ್ದವರು ಮೈಸೂರಿಯನ್ನರು ಅಂತ ಹೇಳಬಹುದು. ಮೈಸೂರಿನಲ್ಲಿ ಹುಟ್ಟಿಬೆಳೆದವರು ಮೈಸೂರಿನವರು. ಮಾನ್ಯ ಸದಸ್ಯರು ಶಿವಸೇನೆ ವಿಚಾರ ಕೇಳಿದರು ಅದು ಅಭಿಪ್ರಾಯದ ಮಾತು. ಉತ್ತರ ಕೊಡರಾದೆ.

ಶ್ರೀ ಎ. ಆರ್. ಬದರೀನಾರಾಯಣ್.—ಮೈಸೂರು ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕಾದಾಗ ನಮ್ಮ ಮೈಸೂರು ಸರ್ಕಾರದವರು ಬಹಳ ಧಾರಾಳವಾಗಿ ಅವರಿಗೆ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ನಮ್ಮ ಮೈಸೂರಿನವರಲ್ಲಿ ನಿರುದ್ಯೋಗ ಜಾಸ್ತಿಯಾಗಿರುವ ಈ ಸಂದರ್ಭದಲ್ಲಿ ನಮ್ಮವರನ್ನೇ ತೆಗೆದುಕೊಳ್ಳಬೇಕೆಂಬ ಈ ಒಂದು ಕಂಡೀಷನ್‌ನ್ನು ಹಾಕುವುದು ಸೂಕ್ತವಲ್ಲವೇ ?

Sri K. PUTTASWAMY.—A circular has also been issued to the managements of various factories in the private sector requesting them to review their employment policy and to give preference to local people with requisite qualifications sponsored by Employment Exchanges in the State.

Sri G. CHANDRAKANTH.—Hon. member Sri J. P. Sarvesh brought to the notice of the Government that in Wadi Cement Factory not even a single job has been given to our people. Even Class IV employees have been brought from the North. If so, may I know what action has been taken by our Government ?

Sri K. PUTTASWAMY.—That is what we have been considering. I do not know whether we will be in a position to take any action at all. We have issued a circular requesting them to give preference to local people. The industrialists do come to Government on so many occasions and for so many things. I am s... ... will give all weight to the circular of the Government.

ಶ್ರೀ ವಾಟಾಳ್ ನಾಗರಾಜ್.—ಕೇಂದ್ರ ಸರ್ಕಾರದವರು ಇಲ್ಲಿ ನಡೆಸುತ್ತಿರುವ ಕೈಗಾರಿಕೆಗಳಲ್ಲಿ ಯಾವ ಯಾವ ಕೈಗಾರಿಕೆಗಳಲ್ಲಿ ಯಾವ ಯಾವ ಭಾಷೆಯ ಜನರು ಎಷ್ಟೆಷ್ಟಿದ್ದಾರೆ, ಅವರ

ಅಂಕಿ ಅಂಶಗಳನ್ನು ಶೇಖರಿಸಲಾಗಿದೆಯೇ ? ಇಲ್ಲಿ ಯಾರು ಕನ್ನಡವನ್ನು ಓದಿ ಅದನ್ನು ಬರೆದು ಅಥವಾ ಕನ್ನಡದಲ್ಲಿ ಮಾತನಾಡತಕ್ಕ ಎಷ್ಟು ಜನರಿಗೆ ಆ ಫ್ಯಾಕ್ಟರಿಗಳಲ್ಲಿ ಕೆಲಸ ದೊರೆತಿದೆ, ಇನ್ನಾದರೂ ಕೇಂದ್ರ ಸರ್ಕಾರದೊಂದಿಗೆ ಪತ್ರವ್ಯವಹಾರ ನಡೆಸಿ ಎಚ್.ಎಂ.ಟಿ. ಮತ್ತು ಎಚ್.ಎ.ಎಲ್. ಫ್ಯಾಕ್ಟರಿಗಳಲ್ಲಿ ಕನ್ನಡಿಗರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುವಂತೆ ಒತ್ತಾಯ ಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ನಾನೇನು ಶತಾವಧಾನಿಯಲ್ಲ, ಅಷ್ಟಾವಾಧಾನಿಯೂ ಅಲ್ಲ. ಮಾನ್ಯ ಸದಸ್ಯರು ಒಂದೊಂದು ಪ್ರಶ್ನೆಯನ್ನು ಕೇಳಿದ್ದರೆ ಅದಕ್ಕೆ ಉತ್ತರವನ್ನು ಕೊಡಬಹುದಿತ್ತು. ಅವರು ಯಾವ ಯಾವ ಫ್ಯಾಕ್ಟರಿಗಳಲ್ಲಿ ಯಾವ ಯಾವ ಭಾಷೆ ಜನರು ಎಷ್ಟೆಷ್ಟಿದ್ದಾರೆಂದು ಕೇಳಿದ್ದಾರೆ. ಅದನ್ನು ಸರ್ಕಾರದವರಿಗೂ ಸಂಗ್ರಹಣೆ ಮಾಡಿಲ್ಲ. ಇನ್ನು ಆ ಫ್ಯಾಕ್ಟರಿಗಳಲ್ಲಿ ಕನ್ನಡಿಗರೊಬ್ಬರಿಗೇ ಹೆಚ್ಚಿನ ಕೆಲಸ ಕೊಡುವಂತೆ ಒತ್ತಾಯ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಪಾಟಾಳ್ ನಾಗರಾಜ್.—ಹಾಗಾದರೆ ಇಲ್ಲಿ ಒಂದು ಶಿಫಸೇನೆ ಹುಟ್ಟಬೇಕೆಂಬುದು ತಮ್ಮ ಉದ್ದೇಶವೇ ?

ಅಧ್ಯಕ್ಷರು.—ಅದು ಇಲ್ಲಿ ಉದ್ಭವವಾಗುವುದಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಈಗ್ಗೆ ಕೆಲವು ದಿನಗಳ ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು ಆ ಉದ್ಯಮಗಳಲ್ಲಿ ಕನ್ನಡಿಗರಿಗೆ ಸಾಕಷ್ಟು ಉದ್ಯೋಗಗಳನ್ನು ದೊರೆಕಿಸಿಕೊಡುವುದಾಗಿ ಭರವಸೆಯನ್ನು ಕೊಟ್ಟಿದ್ದರು ಆದರೆ ಆ ಭರವಸೆಯನ್ನು ಇತ್ತೀಚೆಗೆ ಕೇಂದ್ರದ ಮುಖ್ಯ ಮಂತ್ರಿಗಳಿಂದ ಪತ್ರಬಂದಮೇಲೆ ಕೈಬಿಟ್ಟಂತೆ ಭಾಸವಾಗುತ್ತಿದೆ. ಅದುದರಿಂದ ಇಲ್ಲಿ ಕೆಲಸ ಮಾಡತಕ್ಕ ಕಾರ್ಖಾನೆಗಳಲ್ಲಿ ಇನ್ನಾದರೂ ಸರ್ಕಾರದವರು ತಮ್ಮ ಕೈರಾಗ ಪ್ರಯತ್ನಗಳನ್ನೆಲ್ಲಾ ಮಾಡಿ ಕನ್ನಡಿಗರಿಗೆ ಸಾಕಷ್ಟು ಪ್ರಾತಿನಿಧ್ಯ ದೊರೆಸಲು ಸರ್ಕಾರ ಶಕ್ತಿಮೀರಿ ಕಾರ್ಯಕ್ರಮ ತೆಗೆದು ಕೊಳ್ಳುತ್ತಾರೆಯೇ ?

Sri K. PUTTASWAMY.—Sir, I have already stated that as far as the industrial undertakings which are under the Central Government are concerned, for posts which are equal to or above that of gazetted cadre, their requirements will be obtained from the National Employment Exchange, and for all other posts their requirements will be obtained from the Local Employment Exchange. I think, that takes care of the situation.

ಶ್ರೀ ಎಂ. ನಾಗಪ್ಪ.—ಷಿಪ್ಪಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ, ಲಿಮಿಟೆಡ್, ಸೆಂಟ್ರಲ್ ಗೌನ್ಸ್ ಮೆಂಟ್ ಅಂಡರ್‌ಟೇಕಿಂಗ್, ಮೈಸೂರು ಯೂನಿವರ್ಸಿಟಿ ಗ್ರಾಜುಯೇಟ್ಸ್ ಅಥವಾ ಬಿ.ಇ. ಗ್ರಾಜುಯೇಟ್ಸ್ ಅಲ್ಲಿಗೆ ಸೇರಲಿಕ್ಕೆ ಆಗುತ್ತಾ ಇಲ್ಲ. ಮೈಸೂರು ರಾಜ್ಯದ ಯೂನಿವರ್ಸಿಟಿಯಿಂದ ಪ್ರಾಶಸ್ತ್ಯ ಪಡೆದಂಥವರನ್ನು ಅವರು ಒಪ್ಪುವುದಿಲ್ಲವೆಂಬ ಪರಿಸ್ಥಿತಿಗೆ ಬಂದಿದೆ. ಇದು ಮೈಸೂರು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri K. PUTTASWAMY.—Sir, this question relates to employment in industries started in Mysore State. The hon. Member is referring to an undertaking which is not located in Mysore State.

Mr. SPEAKER.—Next question.

Recommendations of the Tukol Commission regarding raising of Revenue

821. Sri K. H. SRINIVASA (Sagar).—

Will the Minister for Finance, Planning and Youth Welfare be pleased to state :—

(*a*) whether Government has examined the Suggestions made by the Tukol Commission in respect of raising the Revenue of the Government and curtailing its expenditure ;